ಕನಾ. ಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ) 4833
ಪ್ರಾಪ್ತಿ ಕ್ರಮಾಂಕ Accession No.....
ದಿನಾಂಕ Date.....

MYSORE LEGISLATIVE ASSEMBLY

Wednesday, 23rd February 1966.

The House met in the Assembly Chamber, Vidhana Soudha, Bangalore, at one of the Clock.

MR. SPEAKER [SRI B. VAIKUNTA BALIGA, B.A., B.L.,] in the Chair.

STARRED QUESTIONS

(to which oral answers were given)

Divisional Forest Offices.

*Q.—50. Sri S. P. PHAYDE (Ankola).—

Will the Government be pleased to state :—

(*a*) the number of Divisional Forest Offices in North Kanara District and the location of their headquarters ;

(*b*) the reasons for location of the headquarters of Forest Division outside the District ;

(*c*) whether they are aware that public are inconvenienced due to location of Divisional Forest Office, outside the area of the Division ;

(*d*) whether they would shift the Divisional Forest Office to the respective area ;

(*e*) if so, when the Divisional Forest Office whould be shifted ?

A.— Sri B. RACHAIAH (Minister for Forest and Fisheries).—

	(*a*) *Name of the Division*	*Location of Headquarters.*
1	Divisional Forest Office, Kanara Northern Division ...	Dharwar
2	Divisional Forest Office, Kanara Eastern Division ...	Dharwar
3	Divisional Forest Office, Kanara Western Division ...	Karwar
4	Divisional Forest Office, Kanara Southern Division ...	Honnavar
5	Divisional Forest Office, Kanara Central Division ...	Sirsi

(*b*) The headquarters of the Divisional Forest Offices, Kanara Northern Division and the Kanara Eastern Division are at Dharwar wh ch is outside the North Kanara District. Due to paucity of accommodation for the Offices, the headquarters of the two Divisions are temporarily located at Dharwar.

(SRI B. RACHAIAH)

(*c*) Government are aware of inconvenience caused to the public due to location of headquarters of the Forest Division outside the District. They are taking steps to get the headquarters shifted to places in North Kanara District.

(*d*) Yes.

(*e*) The headquarters of the two Divisional Forest Offices, will be shifted immediately after the buildings for the offices and office staff are constructed at Dandeli and Yellapur.

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ವಿಭಾಗದ ಅರಣ್ಯ ಕಚೇರಿಗಳ ಮುಖ್ಯಾಲಯಗಳನ್ನು ಜಿಲ್ಲೆಯ ಹೊರಗಡೆ ಸ್ಥಾಪಿಸಿರುವುದರಿಂದಾಗಿ ಸಾರ್ವಜನಿಕರಿಗೆ ಆಗಿರುವ ತೊಂದರೆಯು ಸರ್ಕಾರದವರಿಗೆ ಗೊತ್ತಿದೆ, ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸ್ಥಳಗಳಿಗೆ ಆ ಮುಖ್ಯಾಲಯಗಳನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರದವರು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ಉತ್ತರವನ್ನು ಕೊಟ್ಟಿದ್ದೀರಿ, ಈಗ ಎರಡು ಮೂರು ವರ್ಷಗಳಿಂದಲೂ ಇದೇ ರೀತಿ ಉತ್ತರವನ್ನು ಕೊಡುತ್ತಿದ್ದೀರಿ, ಇವೊತ್ತೂ ಅದೇ ಉತ್ತರವನ್ನು ಕೊಟ್ಟಿದ್ದೀರಿ; ಈಗ ಯಲ್ಲಾಪುರದಲ್ಲಿ ಇದ್ದಂತಹ ಎಗ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳ ಆಫೀಸುಗಳು ಬೇರೆ ಕಡೆಗೆ ವರ್ಗ ಮಾಡಿರುವುದರಿಂದ, ಆ ಕಟ್ಟಡಕ್ಕೆ ಈ ವಿಭಾಗ ಅರಣ್ಯ ಕಚೇರಿಯನ್ನು ವರ್ಗಾವಣೆ ಮಾಡಿ, ಜನಗಳಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

†ಶ್ರೀ ಬಿ. ರಾಚಯ್ಯ.—ಎಗ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳ ಆಫೀಸುಗಳು ವರ್ಗಾವಣೆಯಾಗಿರುವ ವಿಷಯವನ್ನು ಮಾನ್ಯ ಸದಸ್ಯರು ಈಗ ನನಗೆ ತಿಳಿಸುತ್ತಿದ್ದಾರೆ. ಆ ಕಟ್ಟಡಗಳು ನಮಗೆ ಒಂದು ಪೈಸೆ ದೊರೆಯದೆ ಇದ್ದರೂ ಸಹ ಆದಷ್ಟು ಬೇಗ ವಿಭಾಗ ಅರಣ್ಯ ಕಚೇರಿಯನ್ನು ಅಲ್ಲಿಗೆ ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಪಿ. ಫಾಯದೆ.—ಈ ಪ್ರಶ್ನೆಗೆ ಈಗ ಎರಡು ಮೂರು ವರ್ಷಗಳಿಂದಲೂ ಇದೇ ರೀತಿ ಉತ್ತರವನ್ನು ಕೊಡುತ್ತಿದ್ದೀರಿ. ಆಸ್ಪತ್ರೆಗಳನ್ನು ಕಟ್ಟಿಸಿ ರೋಗಿಗಳಿಗೆ ಚಿಕಿತ್ಸೆಯನ್ನು ಕೊಡಿಸುವುದಕ್ಕೆ ಯಾವ ರೀತಿ ಏರ್ಪಾಡು ಮಾಡುತ್ತಾರೆಯೋ ಅದೇರೀತಿ ಇದನ್ನು ಭಾವಿಸಿಕೊಂಡು ಜಿಲ್ಲೆಯ ಹೊರಗಡೆ ಇರತಕ್ಕಂಥ ವಿಭಾಗ ಅರಣ್ಯ ಕಚೇರಿಗಳ ಮುಖ್ಯಾಲಯಗಳನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸ್ಥಳಗಳಿಗೆ ಸ್ಥಳಾಂತರ ಮಾಡಿ ಆ ಭಾಗದ ಜನಗಳಿಗೆ ಇರತಕ್ಕ ತೊಂದರೆಯನ್ನು ತಪ್ಪಿಸಿ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ರಾಚಯ್ಯ.—ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಧಾರವಾಡ ಮತ್ತು ಕಾರವಾರದಲ್ಲಿರತಕ್ಕ ಎರೆಡು ವಿಭಾಗ ಅರಣ್ಯ ಕಚೇರಿಗಳ ಮುಖ್ಯಾಲಯಗಳನ್ನು ದಾಂಡೇಲಿ ಮತ್ತು ಯಲ್ಲಾಪುರಗಳಿಗೆ ಸ್ಥಳಾಂತರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ತುರ್ತು ಪರಿಸ್ಥಿತಿ ಇರುವುದರಿಂದ ಹಣಕಾಸಿನ ತೊಂದರೆಯುಂಟಾಗಿ ಕಟ್ಟಡಗಳನ್ನು ಕಟ್ಟಿಸುವುದನ್ನು ಸ್ವಲ್ಪ ನಿಧಾನ ಮಾಡುತ್ತಿರುವುದರಿಂದ ಆ ಕಾರ್ಯ ಸ್ವಲ್ಪ ನಿಧಾನವಾಗುತ್ತಿದೆ. ಆ ಪ್ರದೇಶದಲ್ಲಿರತಕ್ಕ ಜನಗಳಿಗೆ ಕಷ್ಟ ಏನಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಈಗ ಅಲ್ಲಿರತಕ್ಕ ಪಬ್ಲಿಕ್ ವರ್ಕ್ಸ್ ಇಲಾಖೆಯ ಕಟ್ಟಡ ಖಾಲಿಯಾಗಿ ಅದು ದೊರೆಯುವುದಾದರೆ ಮುಂದಿನ ವರ್ಷ ಏಪ್ರಿಲ್ ತಿಂಗಳಿನಲ್ಲಿ ವಿಭಾಗ ಅರಣ್ಯ ಕಚೇರಿಯನ್ನು ಅಲ್ಲಿಗೆ ವರ್ಗಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

———

†Indicates that the remarks or speeches have not been revised by the member concerned.